
ಹೆಣ್ಣು ಇವಳು. ಚಂದ್ರಿಯ ಜಾತಿಯನ್ನು ಕಟ್ಟಿಕೊಂಡು ಮಾಡುವುದಾದರೂ ಏನು? ಸೆರಗು ಸರಿಮಾಡಿಕೊಂಡು ಚಂದ್ರಿ ಎದ್ದು ಕುಳಿತಳು. ನಗಾಡುತ್ತಾ ಕೇಳಿದಳು: "ಹೀಗೆ ಮಾಡುವುದಾ?" ನೂರಾರು ಅರ್ಥಗಳಿವೆ ಎಂದು ಅನಿಸಿತು ನಾರಣಪ್ಪನಿಗೆ. "ನಾಳೆ ನಾನು ಮೈಗೆ ಎಣ್ಣೆ ಹಾಕಿ ಸ್ನಾನ ಮಾಡಬೇಕಷ್ಟೆ" ಎಂದ.



ಕತೆಯ ಕೊನೆಯಲ್ಲಿ ನಾರಣಪ್ಪ ಒಂದು ಮಾತನ್ನು ಹೇಳಿದ್ದು ಮಾತ್ರ ಮನಸ್ಸಿಗೆ ತಾಗಿತು. "ನೋಡಿ ಇವ್ರೆ, ಮನುಷ್ಯನ ಅಸ್ತಿತ್ವ ಮತ್ತು ನಾಸ್ತಿತ್ವ ಎರಡೂ ಒಂದೇ. ಅದರ ಬಗ್ಗೆ ಹೇಳಿ ಪ್ರಯೋಜನವಿಲ್ಲ. ನನಗೆ ಚಂದ್ರಿ ಹೆಣ್ಣಾಗಿ ಬಂದಳು. ಅವಳು ನನಗೆ ಸುಖ ಕೊಟ್ಟಳು. ಪ್ರೀತಿ ನೀಡಿದಳು. ನನಗೆ ಆ ಪ್ರೀತಿ ಬೇಕಿತ್ತು. ಜೀವಕ್ಕೆ ಮತ್ತೊಂದು ಜೀವ ಬೇಕಾಗುತ್ತದೆ. ಮನುಷ್ಯರಿಗೆ ಮನುಷ್ಯ ಪ್ರೀತಿ ಸಿಗದೆ ಹೋದರೆ ನಾವು ಶವ ಆಗುತ್ತೇವೆ. ನನಗೂ ಚಂದ್ರಿಗೂ ಇದು ಇತ್ತು. ಅಗ್ರಹಾರದ ಬ್ರಾಹ್ಮಣರು ಏನೇ ಹೇಳಿದರೂ ಅವರಿಗೆ ಇದು ಅರ್ಥವಾಗುತ್ತದೆಯೇ? ಅವರಿಗೆ ಮಡಿ ಮತ್ತು ಮೈಲಿಗೆ ಎರಡು ಮಾತ್ರವೇ ಗೊತ್ತು. ಗಂಡಿಗೆ ಹೆಣ್ಣಿನ ಶಕ್ತಿ ಬೇಕು, ಹಾಗೆಯೇ ಹೆಣ್ಣಿಗೆ ಗಂಡಿನ ಶಕ್ತಿಯೂ ಬೇಕಾಗುತ್ತದೆ. ಅದನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲ. ನಾನು ಲಲಿತೆಯಿಂದ ಏನು ಕಳೆದುಕೊಂಡಿದ್ದೆನೋ ಅದನ್ನು ಚಂದ್ರಿಯಿಂದ ಪಡೆದೆ. ಅದರಲ್ಲಿ ಏನು ತಪ್ಪಿದೆ? ನೀವು ಓದು ಬರಹಗಳನ್ನು ಕಲಿತವರು. ನಿಮಗೆ ಒಂದು ಅಹಂಕಾರವಿರುತ್ತದೆ. ನಿಮ್ಮ ಮೂಗಿನ ನೇರಕ್ಕೆ ಜನರನ್ನು ನಿರ್ಣಯ ಮಾಡುತ್ತೀರಿ. ನೀವು ಊಹಿಸಿದ ಥರ ಈ ಜಗತ್ತು ಇಲ್ಲ, ಇವ್ರೆ – ನಿಮ್ಮ ಹೆಸರೇನು? ತಿಳಿಯಲಿಲ್ಲ. ಹೋಗಲಿ ಬಿಡಿ... ನಾನು ಯಾವತ್ತೂ ಈ ಲೇಖಕರನ್ನು ನಂಬುವುದೇ ಇಲ್ಲ. ಅವರು ಇಲ್ಲದನ್ನು ಇದೆ ಎಂದು ಹೇಳುತ್ತಾರೆ. ಯಾವುದು ಇದೆಯೋ ಅದನ್ನು ಇಲ್ಲ ಎಂದು ಭಾವಿಸುತ್ತಾರೆ" ಕುಡಿದುದರಿಂದ ಅವನ ಮಾತಿನಲ್ಲಿ ಒಂದು ಸಲೀಸು ಎನ್ನುವುದು ಇರಲಿಲ್ಲ. ಕೆಲವು ವಿಚಾರಗಳು ಹಿಂದೆ ಮುಂದೆ ಆಗಿದ್ದವು.

ಅವನ ಕತೆಯನ್ನು ಕೇಳುತ್ತಾ ಇರುವಾಗ ಕಾರಿನ ಮೆಕಾನಿಕ್ ಬಂದು ಕಾರು ಸರಿಮಾಡಿದ. ನನಗೂ ಅವನ ಕತೆ ಕೇಳಿ ತಲೆ ಧಿಂ ಎಂದು ಅನಿಸಿತು. ಅವನಿಗೆ ಹೇಳಿದೆ: "ನಾನು ಹೊರಡುತ್ತೇನೆ. ಬಿ.ಆರ್ ಪ್ರಾಜೆಕ್ಟಿಗೆ ಹೋಗಬೇಕು." "ಸರಿ ಹೋಗಿ ಬನ್ನಿ" ಅವರು ಅಲ್ಲಿಂದ ಎದ್ದು ಹೊರಟರು. ದೇಹ ವಾಲುವುದು ಸರಿಯಾಗಿ ಕಾಣಿಸಿತು. ಅವರ ಬಗ್ಗೆ ಯೋಚನೆ ಮಾಡುತ್ತಾ ಬಂದೆ. ಮನೆಗೆ ತಲುಪುವಾಗ ರಾತ್ರಿ ಹತ್ತುಗಂಟೆ ಆಗಿತ್ತು.


**ಕೇಶವ ಶರ್ಮ ಕೆ.**

ವಿಮರ್ಶಕ, ಕಾದಂಬರಿಕಾರ ಕೇಶವ ಶರ್ಮ ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು. ಅವರ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕೋಡಂದೂರು. ಪ್ರಸ್ತುತ ಶಿವಮೊಗ್ಗ ಜಿಲ್ಲೆಯ ಶಾಂತಿನಗರದಲ್ಲಿ ನೆಲೆಸಿದ್ದಾರೆ.

30ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕೆಲವು ಪ್ರಕಟಿತ ಕೃತಿಗಳು: 'ನವೋದಯ ವಿಮರ್ಶೆ', 'ಪರಿಕಲ್ಪನೆಗಳ ಕೋಶ – 7', 'ಪಶ್ಚಿಮ ಮತ್ತು ಗಾಂಧಿ', 'ಚಾರು ಚರಿತ', 'ನಿಶಿತನ ಕೆಂಪು ಡೈರಿ' (ಕಾದಂಬರಿಗಳು).